

# ಒಂದಲ್ಲಾ ಎರಡನೇ ಸಲ!





ಡಿ. ಸತ್ಯಪ್ರಕಾಶ್ ನಿರ್ದೇಶಿಸಿದ್ದ ಸಿನಿಮಾ 'ಒಂದಲ್ಲಾ ಎರಡಲ್ಲಾ', ಕಳೆದ ವರ್ಷ ಆಗಸ್ಟ್ ತಿಂಗಳಲ್ಲಿ ಬಿಡುಗಡೆಯಾಗಿತ್ತು. ಆದರೆ ಪ್ರಚಾರ ಮತ್ತು ಕೆಲವು ತಾಂತ್ರಿಕ ಕಾರಣಗಳಿಂದ ಚಿತ್ರಮಂದಿರಗಳಲ್ಲಿ ಹೆಚ್ಚು ದಿನ ಉಳಿದುಕೊಳ್ಳಲಿಲ್ಲ. ಸಿನಿಮಾ ಬಗ್ಗೆ ಜನರಲ್ಲಿ ಚರ್ಚೆ ಶುರುವಾಗುವಷ್ಟರಲ್ಲಿಯೇ ಚಿತ್ರಮಂದಿರಗಳಿಂದ ಎತ್ತಂಗಡಿಯಾಗಿತ್ತು.

ಹೀಗೆ ಕಣ್ಮರೆಯಾಗಿದ್ದ ಚಿತ್ರ ಮತ್ತೆ ಸುದ್ದಿಯಲ್ಲಿ ಬಂದಿದ್ದು ಈ ವರ್ಷದ ರಾಷ್ಟ್ರಪ್ರಶಸ್ತಿ ಪಟ್ಟಿ ಪ್ರಕಟವಾದ ನಂತರ. 'ಒಂದಲ್ಲಾ ಎರಡಲ್ಲಾ' ಚಿತ್ರಕ್ಕೆ ರಾಷ್ಟ್ರೀಯ ಭಾವೈಕ್ಯತೆಯ ಪ್ರಶಸ್ತಿ ಮತ್ತು ಈ ಚಿತ್ರದಲ್ಲಿ ಮುಖ್ಯಪಾತ್ರದಲ್ಲಿ ನಟಿಸಿದ್ದ ರೋಹಿತ್‌ಗೆ ಅತ್ಯುತ್ತಮ ಬಾಲನಟ ಪ್ರಶಸ್ತಿ ಸಂದಿದೆ. ಈ ಹಿನ್ನೆಲೆಯಲ್ಲಿ ಸಿನಿಮಾವನ್ನು ಜನರಿಗೆ ಸರಿಯಾಗಿ ತಲುಪಿಸಬೇಕು ಎಂದು ನಿರ್ಮಾಪಕ ಉಮಾಪತಿ ಅವರಿಗೂ ಅನಿಸಿದೆ. ಪರಿಣಾಮವಾಗಿ 'ಒಂದಲ್ಲಾ ಎರಡಲ್ಲಾ' ಮರುಬಿಡುಗಡೆಯ ಸಿದ್ಧತೆಗಳು ನಡೆಯುತ್ತಿವೆ.

ಹೌದು, ಈ ನವೆಂಬರ್ ತಿಂಗಳಲ್ಲಿ 'ಒಂದಲ್ಲಾ ಎರಡಲ್ಲಾ' ಚಿತ್ರವನ್ನು ಮರುಬಿಡುಗಡೆ ಮಾಡುವ ಸಿದ್ಧತೆಯಲ್ಲಿ ಚಿತ್ರತಂಡವಿದೆ. 'ಎರಡು ರಾಷ್ಟ್ರಪ್ರಶಸ್ತಿಗಳನ್ನು ಪಡೆದುಕೊಂಡಿರುವ ಈ ಸದಭಿರುಚಿಯ ಚಿತ್ರವನ್ನು ಜನರಿಗೆ ತಲುಪಿಸಬೇಕು ಎಂಬ ನಿರ್ಮಾಪಕರ ಹಂಬಲದ ಫಲವಾಗಿಯೇ ಈ ಚಿತ್ರ ಮರುಬಿಡುಗಡೆಗೊಳ್ಳುತ್ತಿದೆ' ಎನ್ನುವುದು ತಂಡದ ಮಾತು.

ಮುಸ್ಲಿಂ ಬಾಲಕನೊಬ್ಬ, ಕಳೆದುಹೋಗಿರುವ ತನ್ನ ಹಸುವನ್ನು ಹುಡುಕಿಕೊಂಡು ಪಟ್ಟಣಕ್ಕೆ ಬಂದಾಗ ಎದುರಿಸುವ ಸನ್ನಿವೇಶಗಳೇ ಈ ಚಿತ್ರದ ಕಥನಪಥ. ಲಘುವಾದ ಹಾಸ್ಯದ ಮೂಲಕವೇ ಮಾನವೀಯತೆಯ ಕಥೆಯನ್ನು ದಾಟಿಸುವ ಈ ಸಿನಿಮಾ ಸರಿಯಾದ ಪ್ರಚಾರದೊಂದಿಗೆ ಮರುಬಿಡುಗಡೆ ಮಾಡಿದರೆ ಖಂಡಿತವಾಗಿಯೂ ಜನರು ಸ್ವೀಕರಿಸಿ, ವಾಣಿಜ್ಯಾತ್ಮಕವಾಗಿಯೂ ಗೆಲ್ಲಿಸುತ್ತಾರೆ ಎಂಬ ನಂಬಿಕೆ ನಿರ್ದೇಶಕ ಮತ್ತು ನಿರ್ಮಾಪಕರಿಬ್ಬರಿಗೂ ಇದೆ. ■

# ಅಳಿದು ಉಳಿದವರು ತೆರೆಗೆ ಬರುವರು

'ಅಳಿದು ಉಳಿದವರು' ಅಂತೂ ಇಂತೂ ತೆರೆಯ ಮೇಲೆ ಬರುವ ಸೂಚನೆಗಳು ಕಾಣುತ್ತಿವೆ. ಬಹುತೇಕರಿಗೆ ಇಂಥದ್ದೊಂದು ಸಿನಿಮಾ ಶುರುವಾದ ವಿಷಯವೇ ತಿಳಿದಿರಲಿಕ್ಕಿಲ್ಲ.

'ಕಹಿ' ಸಿನಿಮಾ ನಿರ್ದೇಶಕ ಅರವಿಂದ ಶಾಸ್ತ್ರಿ ಆ್ಯಕ್ಷನ್ ಕಟ್ ಹೇಳಿದ ಈ ಸಿನಿಮಾದಲ್ಲಿ ಆಶು ಬೆದ್ರ ಮತ್ತು ಸಂಗೀತಾ ಭಟ್ ಮುಖ್ಯಪಾತ್ರದಲ್ಲಿ ನಟಿಸಿದ್ದಾರೆ. ಈ ಚಿತ್ರದ ನಿರ್ಮಾಪಕರೂ ಆಶು ಬೆದ್ರ ಅವರೇ. ನಾಯಕನಾಗಿ ಅವರಿಗೆ ಇದು ಮೊದಲ ಸಿನಿಮಾ.

ಒಂದೂವರೆ ವರ್ಷದ ಹಿಂದೆಯೇ ಚಿತ್ರ ಪೂರ್ಣಗೊಂಡಿದ್ದರೂ ಬಿಡುಗಡೆಯ ಭಾಗ್ಯ ಮಾತ್ರ ಸಿಕ್ಕಿರಲಿಲ್ಲ. ಕಾರಣ, ನಿರ್ಮಾಪಕ ಕಮ್ ನಟ ಆಶು ಬೆದ್ರ ಅವರು ಇನ್ನೊಂದು ಸಿನಿಮಾದಲ್ಲಿ ತೊಡಗಿಕೊಂಡಿದ್ದರು. ಆ ಚಿತ್ರ ಬಿಡುಗಡೆ ಆದಮೇಲೆ ಇದನ್ನು ಬಿಡುಗಡೆ ಮಾಡಬೇಕು ಎಂಬ ಲೆಕ್ಕಾಚಾರ ಅವರಿಗಿತ್ತು. ಆದರೆ ಅದಕ್ಕೂ 'ಅಳಿದು ಉಳಿದವರು' ಸಿನಿಮಾ ಬಿಡುಗಡೆಯಾಗುವ ಲಕ್ಷಣಗಳು ಕಾಣುತ್ತಿವೆ.

ಸಸ್ಪೆನ್ಸ್, ಥ್ರಿಲ್ಲರ್ ಕಥೆಯನ್ನು ಹೊಂದಿರುವ ಈ ಚಿತ್ರದಲ್ಲಿ ಪವನ್‌ಕುಮಾರ್, ಅತುಲ್ ಕುಲಕರ್ಣಿ, ಬಿ. ಸುರೇಶ್ ಕೂಡ ತಾರಾಗಣದಲ್ಲಿದ್ದಾರೆ. ಮಿಥುನ್ ಮುಕುಂದನ್ ಸಂಗೀತ ಸಂಯೋಜನೆ ಮಾಡಿದ್ದಾರೆ. ಇತ್ತೀಚೆಗೆ ನಿರ್ದೇಶಕ ಅರವಿಂದ್ ಶಾಸ್ತ್ರಿ ಅವರು ತಮ್ಮ ಫೇಸ್‌ಬುಕ್ ಖಾತೆಯಲ್ಲಿ ಈ ಸಿನಿಮಾದ ಕುರಿತು ಪೋಸ್ಟ್ ಮಾಡಿದ್ದು, 'ಅಳಿದು ಉಳಿದವರು' ಸಿನಿಮಾ ಚಿತ್ರಮಂದಿರಗಳಲ್ಲಿ ಬಿಡುಗಡೆಯಾಗಲು ಸಿದ್ಧವಾಗಿದೆ ಎಂದು ಬರೆದುಕೊಂಡಿದ್ದಾರೆ. ಈ ತಿಂಗಳ ಅಂತ್ಯ ಅಥವಾ ನವೆಂಬರ್ ಮೊದಲವಾರ ಚಿತ್ರವನ್ನು ತೆರೆಗೆ ತರಬೇಕು ಎನ್ನುವುದು ತಂಡದ ಆಲೋಚನೆ. ■



